



ಮತ್ತೊಂದು ಪಾರ್ಶ್ವ ಚೀನಾದ ಅಂತರಾಷ್ಟ್ರೀಯ ಗಡಿಗೆ ಸಮೀಪ ಇರುವುದರಿಂದ ಆ ಭಾಗದಲ್ಲಿ ಹಾರಾಟ ನಿಷಿದ್ಧ ಎಂದು ಚಾಲಕ ಮಾಹಿತಿ ನೀಡಿದ.

ಹಿಂತಿರುಗುವ ಸಮಯ. ಚಾಲಕ 'ಎಲ್ಲರೂ ನಿಮ್ಮ ಆಸನಗಳಲ್ಲಿ ಆಸೀನರಾಗಿ' ಎಂದು ಆದೇಶಿಸಿ ಸೊಂಟಪಟ್ಟಿಯನ್ನು ಬಿಗಿಮಾಡಿಕೊಳ್ಳಿ ಎಂದು ಮತ್ತೆ ನೆನಪಿಸಿದ. ಕೆಲವೇ ಸಮಯದಲ್ಲಿ ನಾವು ಕಠ್ಮಂಡು ವಿಮಾನ ನಿಲ್ದಾಣ ತಲುಪುತ್ತೇವೆ ಎಂದಾಗ ಎಲ್ಲರಲ್ಲೂ ಒಂದು ವಿಧದ ನಿರಾಶೆಯ ಭಾವ–ಅಯ್ಯೋ ಇಷ್ಟು ಬೇಗ ಮುಗಿದೇ ಹೋಯಿತೆ?!

ಮಿಂಚಿನ ವೇಗದಲ್ಲಿ ವಿಮಾನ ನಿಲ್ದಾಣವನ್ನು ತಲುಪಿತ್ತು. ನಿಜಕ್ಕೂ ಈ ವಿಹಾರ ವಾಸ್ತವವೇ ಅಥವಾ ಕನಸೇ ಎಂದು ಒಮ್ಮೆ ಅನಿಸಿದ್ದು ನಿಜ!

ನೇಪಾಳಕ್ಕೆ ಪ್ರವಾಸ ಕೈಗೊಳ್ಳುವವರು ಈ ವಾಯುವಿಹಾರವನ್ನು ಪ್ರವಾಸ ಪಟ್ಟಿಯಲ್ಲಿ ಕಡ್ಡಾಯವಾಗಿ ಸೇರಿಸಿಕೊಳ್ಳುವುದು ಒಳ್ಳೆಯದು. ಹಿಮಾಲಯದ ನೈಜ ಸೌಂದರ್ಯ ಸವಿಯಲು ಇದೊಂದು ಸುಲಭದ ದಾರಿ.
ವಾಯುವಿಹಾರಕ್ಕೆ ಫೆಬ್ರುವರಿ– –ಮೇ ಹಾಗೂ ಅಕ್ಟೋಬರ್–– ಡಿಸೆಂಬರ್ ಅವಧಿ ಸಕಾಲವಾಗಿದೆ. ಒಂದು ಗಂಟೆಯ ಈ ಪ್ರವಾಸಕ್ಕೆ ಅಲ್ಲಿನ ಪ್ರವಾಸ ಆಯೋಜಕರು ಸುಮಾರು 6 ರಿಂದ 7 ಸಾವಿರ ರೂಪಾಯಿ ಶುಲ್ಕ ನಿಗದಿ ಪಡಿಸುತ್ತಾರೆ. ಆದರೆ ಮುಂಗಡವಾಗಿ ಆಸನಗಳನ್ನು ಮೀಸಲು ಇರಿಸಬೇಕಾಗುತ್ತದೆ.